ಪ್ರವಾಸಿಗರನ್ನು ಆಕರ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳು

282 (1749) ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991ರಲ್ಲಿ ಆಚರಿಸಲಾಗುವ ಭಾರತವನ್ನು ಸಂದರ್ಶನ ವರ್ಷದಲ್ಲಿ ಪ್ರವಾಸಿಗರನ್ನು ಅಪೇಕ್ಷಿಸಲು (ಆಕರ್ಷಿಸಲು) ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಸರ್ಕಾರವು ಈ ಕಾರ್ಯಕ್ರಮಕ್ಕಾಗಿ ರಾಜ್ಯದಲ್ಲಿ ಎಲ್ಲೆಲ್ಲಿ ಪ್ರವಾಸಿ ತಾಣಗಳನ್ನು ಗುರುತಿಸಿದೆ;

ಇ) ಈ ಕಾರ್ಯಕ್ರಮಕ್ಕಾಗಿ ಕೇಂದ್ರ ಸರ್ಕಾರ ಹಣವನ್ನೇನಾದರೂ ನೀಡಿದೆಯೇ;

ಈ) ಮೊಳಕಾಲ್ಮೂರು ಕ್ಷೇತ್ರದ ನಾಯ್ಕನಹಳ್ಳಿ ತಿಪ್ಪೇರುದ್ರಸ್ವಾಮಿಯ ಮತ್ತು ಹೊಸ ಗುಡ್ಡದ ಒಂದೇ ಬಂಡೆಯಲ್ಲಿ ಕೊರೆದಿರುವ ಶಿವಲಿಂಗ ದೇವಸ್ಥಾನಗಳನ್ನು ಪ್ರವಾಸಿ ತಾಣದಲ್ಲಿ ಸೇರಿಸಲಾಗುವುದೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :

ಅ) 1) 1991ರ ಭಾರತ ಸಂದರ್ಶನ ವರ್ಷದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಸರ್ಕಾರವು ಈ ಕೆಳಕಂಡ ಕಾರ್ಯಕ್ರಮಗಳನ್ನು ಏರ್ಪಡಿಸಿತ್ತು.

1) ಮಡಕೇರಿ - ವಸಂತೋತ್ಸವ
2) ಪಟ್ಟದಕಲ್ಲು - ಬಿಜಾಪುರ ಉತ್ಸವ
3) ಮೈಸೂರು - ದಸರಾ ಉತ್ಸವ
4) ಚಿತ್ರದುರ್ಗ ಉತ್ಸವ
5) ಕರಾವಳಿ ಉತ್ಸವ

2) ರಾಜ್ಯದಲ್ಲಿ ಜಲಕ್ರೀಡೆ ಅಭಿವೃದ್ಧಿಪಡಿಸಲು ಪ್ರವಾಸೋದ್ಯಮ ಇಲಾಖೆ ವಿವಿಧ ಮಾದರಿಯ ದೋಣಿಗಳನ್ನು ಟೆಂಟ್‌ಗಳನ್ನು ಖರೀದಿಸಿ ಕೆಎಸ್‌ಟಿಡಿಸಿ, ಜಂಗಲ್ ಲಾಡ್ಜ್‌ಸ್ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಸಂಸ್ಥೆಗಳಿಗೆ ವಿತರಿಸಲಾಯಿತು.

3) ಕೇಂದ್ರ ನೆರವಿನೊಂದಿಗೆ ಕರ್ನಾಟಕದ ಬಗ್ಗೆ ಕಿರು ಹೊತ್ತಿಗೆಗಳನ್ನು ಮುದ್ರಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ರಾಜ್ಯ ಸರ್ಕಾರವು ಈ ಕಾರ್ಯಕ್ರಮಕ್ಕಾಗಿ ನಿರ್ದಿಷ್ಟ ಸ್ಥಳಗಳನ್ನು ಗುರುತಿಸಿರುವುದಿಲ್ಲ.

ಇ) ಹೌದು.

ಈ) ನಾಯ್ಕನಹಟ್ಟಿ ಮತ್ತು ಹೊಸ ಗುಡ್ಡ ಕ್ಷೇತ್ರಗಳನ್ನು ಈ ಇಲಾಖೆಯ ಪ್ರವಾಸಿ ತಾಣಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ನಾಯ್ಕನಹಟ್ಟಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು 3 ಎಕರೆ ಜಮೀನನ್ನು ಪ್ರವಾಸೋದ್ಯಮ ಇಲಾಖೆಯ ವಶಕ್ಕೆ ಈಗಾಗಲೇ ತೆಗೆದುಕೊಳ್ಳಲಾಗಿದೆ.

ಶ್ರೀ ಎನ್.ಜಿ. ನಾಯಕ್ : ಮಾನ್ಯಸಚಿವರು ಈ ವಿಷಯದಲ್ಲಿ . 5 ಕಡೆ ಜಾಗಗಳನ್ನು ಗುರ್ತಿಸಿದ್ದಾರೆ. ಆದರೆ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ದ್ವಾಪರ ಯುಗದಲ್ಲಿ ಕಟ್ಟಿರುವ ಒಂದು ದೇವಸ್ಥಾನ ಇದೆ. ಅದನ್ನು ದಕ್ಷಿಣ ಕಾಶಿ ಅನ್ನುತ್ತಾರೆ. ಆದ್ದರಿಂದ ಅಲ್ಲಿ ಒಂದು ಪ್ರವಾಸಿಮಂದಿರವನ್ನು ಕಟ್ಟುವುದು ಏನಾದರೂ ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಕೆ. ಶಿವಮೂರ್ತಿ : ಮಾನ್ಯ ನಾಯಕರು ತಮ್ಮ ಮೊಳಕಾಲ್ಮೂರು ಕ್ಷೇತ್ರದಲ್ಲಿರುವ ಒಂದು ದೇವಸ್ಥಾನ ಹಾಗೂ ನಾಯಕನಹಟ್ಟಿ ದೇವಸ್ಥಾನವನ್ನು ಪ್ರವಾಸಿ ಕೇಂದ್ರವಾಗಿ ಗುರ್ತಿಸಬೇಕೆಂದು ಕೇಳಿಕೊಂಡಿದ್ದಾರೆ ನಾವು ಈಗಾಗಲೇ ಇದನ್ನು ಪ್ರವಾಸಿಗರ ಪಟ್ಟಿಯಲ್ಲಿ ಸೇರಿಸಿದ್ದೇವೆ.

ಶ್ರೀ ಎನ್.ಜಿ. ನಾಯಿಕ್ : ಮೊಳಕಾಲ್ಮೂರು ತಾಲ್ಲೂಕಿನಲ್ಲಿ ದ್ವಾಪರ ಯುಗದಲ್ಲಿ ಕಟ್ಟಿರುವ ದೇವಸ್ಥಾನ ಇದೆ. ಅಲ್ಲಿ ಲಕ್ಷಾಂತರ ಜನ ಸೇರುತ್ತಾರೆ. ಅದು ಬಹಳ ಪ್ರಸಿದ್ಧವಾದದ್ದು. ಅದನ್ನೇನಾದರೂ ಪ್ರವಾಸಿಮಂದಿರಗಳ ಪಟ್ಟಿಯಲ್ಲಿ ಸೇರಿಸಲು ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಕೆ. ಶಿವಮೂರ್ತಿ : ಅದನ್ನು ಟೂರಿಸ್ಟ್‌ಸೆಂಟರ್ ಮಾಡಲು ಪಟ್ಟಿಯಲ್ಲಿ ಸೇರಿಸಿಕೊಂಡಿದ್ದೇವೆ. ಅದನ್ನು ಡೆವಲಪ್ ಮಾಡುವ ದೃಷ್ಟಿಯಿಂದ ನಾಯಕನಹಟ್ಟಿ ತಿಪ್ಪೇರುದ್ರ ಮಠದ ವ್ಯಾಪ್ತಿಗೆ ಬರುವ ಮೂರೆಕರೆ ಜಮೀನನ್ನು ಟೂರಿಸ್ಟ್ ಇಲಾಖೆಗೆ ವಹಿಸಿಕೊಟ್ಟಿದ್ದಾರೆ. ಆ ಸಮಿತಿಯವರೂ ಬಂದು ನನ್ನನ್ನು ಭೇಟಿಯಾಗಿದ್ದರು.

ಶ್ರೀ ಎನ್.ಜಿ. ನಾಯಕ್ : ನಾನು ಬೇರೆ ಕ್ವೆಶ್ಚನ್ ಕೇಳುತ್ತಾ ಇರುವುದು ಈ ಕಾರ್ಯಕ್ರಮಗಳಿಗಾಗಿ ಕೇಂದ್ರ ಸರ್ಕಾರದಿಂದ ಈ ಸಾಲಿಗೆ ಎಷ್ಟು ಹಣ ಬಂದಿದೆ.

ಶ್ರೀ ಕೆ. ಶಿವಮೂರ್ತಿ : ಚಳ್ಳಕೆರೆ ಕ್ಷೇತ್ರದ ಬಗ್ಗೆ ಕೇಳಿದ್ದಾರೆ. ಈ ವರ್ಷದ ಏಪ್ರಿಲ್‌ನಲ್ಲಿ ಟೂರಿಸ್ಟ್‌ಗೆ ಫೆಸಿಲಿಟಿ ಕೊಡುವುದಕ್ಕಾಗಿ ಏನಾದರೂ ಕಾರ್ಯಕ್ರಮ ಹಾಕಲು ಪರಿಶೀಲನೆ ಮಾಡುತ್ತೇವೆ. ನಾಯಕನಹಟ್ಟಿ ಜಾತ್ರೆ ಬರುತ್ತದೆ. ನಾವೂ ನಾಯಕರು ಇಬ್ಬರೂ ಒಟ್ಟಿಗೆ ಹೋಗಿ ನೋಡಿಬಂದು ಯಾವ ರೀತಿ ಯೋಜನೆ ತಯಾರಿಸಿಕೊಡಬಹುದು. ಕೇಂದ್ರಸರ್ಕಾರ ರಾಜ್ಯಸರ್ಕಾರ ಹಣ ಒದಗಿಸಬಹುದೇ ಎಂದು ಪರಿಶೀಲನೆ ಮಾಡುತ್ತೇವೆ.

ಶ್ರೀ ಎನ್.ಜಿ. ನಾಯಕ್ : ಮಾನ್ಯ ಸಚಿವರು ನಾಗನಕಟ್ಟೆ ವಿಚಾರ ಹೇಳುತ್ತಿದ್ದಾರೆಯೇ ವಿನಃ ನಾನು ಕೇಳಿದ ಪ್ರಶ್ನೆಗೆ ಜವಾಬು ಕೊಡುತ್ತಿಲ್ಲ. ಮೊಳಕಾಲ್ಮೂರು ತಾಲ್ಲೂಕಿನಲ್ಲಿ ದ್ವಾಪರ ಯುಗದಲ್ಲಿ ಕಟ್ಟಿಸಿದ ದೇವಸ್ಥಾನವಿದೆ. ಅದನ್ನು ದಕ್ಷಿಣ ಕಾಶಿ ಎನ್ನುತ್ತಾರೆ. ಅದನ್ನು ಅವರು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಈಗ ಅವರ ಗಮನಕ್ಕೆ ತರುತ್ತಿದ್ದೇನೆ. ಮುಂದೆಯಾದರೂ ಅದನ್ನು ಪ್ರವಾಸಿಕೇಂದ್ರವಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಶಿವಮೂರ್ತಿ: ದ್ವಾಪರ ಯುಗದಲ್ಲಿ ಕಟ್ಟಿತೆನ್ನಲಾದ ಶಿವಲಿಂಗ ದೇವಸ್ಥಾನವಂತೆ ಅದು. ಒಂದೇ ಕಲ್ಲಿನಲ್ಲಿ ಕೆತ್ತನೆಯಾದದ್ದು ಬಹಳ ಚೆನ್ನಾಗಿದೆ ಎಂದು ಕೇಳಿದ್ದೇನೆ.

ಉಪಾಧ್ಯಕ್ಷರು : ನೀವು ಇನ್ನೂ ನೋಡಿಲ್ಲ.

ಶ್ರೀ ಕೆ. ಶಿವಮೂರ್ತಿ : ನಾವು ಮತ್ತು ನಾಯಕರು ಒಟ್ಟಿಗೆ ಹೋಗಿ ಅದನ್ನು ನೋಡಿಕೊಂಡು ಬರುತ್ತೇವೆ. ನಾನು ನೋಡಿಲ್ಲ. ಆದರೆ ಹೇಳಿರತಕ್ಕಂಥದ್ದನ್ನು ಕೇಳಿದ್ದೇನೆ. ಅದು ನಮ್ಮ ಜಿಲ್ಲೆಯಲ್ಲಿ ಬರತಕ್ಕಂಥದ್ದು. ಬಹಳ ಸುಂದರವಾಗಿ ಕೆತ್ತಿದ್ದಾರೆ. ಅದನ್ನು ದ್ವಾಪರ ಯುಗದಲ್ಲಿ ಕಟ್ಟಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದೇನೋ ನನಗೆ ಗೊತ್ತಿಲ್ಲ. ನೋಡುವುದಕ್ಕೆ ಬಹಳ ಚೆನ್ನಾಗಿದೆ.

ಅದನ್ನು ಪ್ರವಾಸಿಗರ ಒಂದು ಜಾಗ ಎಂದು ಮಾಡಬೇಕು ಎಂದು ನಮ್ಮ ಮಾನ್ಯ ಸದಸ್ಯರಾದ ನಾಯಕರ ಕಳಕಳಿ ಏನು ಇದೆಯೋ. ಅದನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಅಲ್ಲಿ ಬಂದು ಏನು ಫೆಸಿಲಿಟೀಸನ್ನು ಕೊಡಬೇಕೋ ಮುಂದೆ ಏಪ್ರಿಲ್‌ನಲ್ಲಿ ಅದನ್ನು ಪರಿಶೀಲಿಸುತ್ತೇವೆ.

ಶ್ರೀ ಎನ್.ಜಿ. ನಾಯಕ್ : ಸನ್ಮಾನ್ಯ ಉಪಾಧ್ಯಕ್ಷೆಯವರೆ. ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಿಲ್ಲ. 'ಹೌದು' ಎಂದು ಉತ್ತರದಲ್ಲಿ ಹೇಳಿದ್ದಾರೆ. ಎಷ್ಟು ಹಣ ಬಂದಿದೆ? ಎಲ್ಲೆಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ ? ಅದನ್ನು ತಿಳಿಸಿ.

ಶ್ರೀ ಕೆ. ಶಿವಮೂರ್ತಿ : ಈಗ ಅವರು ಆ ಪ್ರಶ್ನೆಯನ್ನು ಹಾಕಿಲ್ಲ. ಈಗ ನಾಯಕನಟ್ಟಿ ಮತ್ತೆ ಶಿವಲಿಂಗ ದೇವಸ್ಥಾನದ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಾವು ಯಾವುದೇ ಯೋಜನೆಯನ್ನು ಕಳುಹಿಸಿಲ್ಲ. ರಾಜ್ಯ ಸರ್ಕಾರ ಕಳುಹಿಸಿಲ್ಲ. ಆದರೆ ಜಮೀನನ್ನು ಕೊಡಿ ಎಂದು ಕೇಳಿದ್ದಾರೆ. ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದೇವೆ. ಈಗ ನಾವು ಅದರ ಅಂದಾಜನ್ನು ತಯಾರುಮಾಡಿ ಕಳುಹಿಸಿಕೊಡಬೇಕಾಗುತ್ತದೆ. ಅದರ ಅಂದಾಜನ್ನು ತಯಾರುಮಾಡಿದಮೇಲೆ ಎಷ್ಟು ಹಣವನ್ನು ಕೊಡಬೇಕು ಎನ್ನತಕ್ಕಂಥ ತೀರ್ಮಾನಕ್ಕೆ ಬರುತ್ತೇವೆ.

ಶ್ರೀ ಎನ್.ಜಿ. ನಾಯಕ್ : ಸರಿಯಾಗಿ ನನಗೆ ಉತ್ತರ ಬಂದಿಲ್ಲ. ನಾನು ಕೇಳುತ್ತಿರುವುದು ಏನೆಂದರೆ. ಈಗ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ? ಎಲ್ಲೆಲ್ಲಿ ಎಷ್ಟೆಷ್ಟು ಹಣವನ್ನು ಖರ್ಚುಮಾಡಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಕೆ. ಶಿವಮೂರ್ತಿ : ಈಗ ನಾಯಕರು ಯಾವ ಪ್ರಶ್ನೆಯನ್ನು ಕೇಳುತ್ತಿದ್ದಾರೆಂದು ನನಗೆ ಅರ್ಥವಾಗಿಲ್ಲ.

ಉಪಾಧ್ಯಕ್ಷರು : ಕೇಂದ್ರ ಸರ್ಕಾರದಿಂದ ತಮಗೆ ಟೂರಿಸಂಗಾಗಿ ಎಷ್ಟು ಎಷ್ಟು ಹಣ ಬಿಡುಗಡೆಯಾಗಿದೆ ಎಂದು ಕೇಳುತ್ತಿದ್ದಾರೆ.

ಶ್ರೀ ಕೆ. ಶಿವಮೂರ್ತಿ : ಯಾವ ಯೋಜನೆ ಅಡಿಯಲ್ಲಿ ಯಾವ ಹಣವನ್ನು ಕೇಳುತ್ತಿದ್ದಾರೆ ಎಂದು ನನಗೆ ಅರ್ಥವಾಗಿಲ್ಲ. ಏಕೆಂದರೆ ಅವರ ಮೊದಲನೆ ಪ್ರಶ್ನೆಗೆ 'ಭಾರತವನ್ನು ಸಂದರ್ಶಿಸಿ ವರ್ಷದಲ್ಲಿ' ತಾವು ಏನು ಕಾರ್ಯಕ್ರಮವನ್ನು ಹಮ್ಮಿ ಕೊಂಡಿದ್ದೀರಿ ಎಂದು ಕೇಳಿದ್ದಾರೆ. ಅದರ ಬಗ್ಗೆ ಕೇಳಿದರೆ ನಾನು ಉತ್ತರವನ್ನು ಕೊಡುತ್ತೇನೆ. ಆದರೆ ಮೊಳಕಾಲ್ಮೂರು ಕ್ಷೇತ್ರದ ಬಗ್ಗೆ ಕೇಳುತ್ತಿದ್ದಾರೆ. ಅದರ ಬಗ್ಗೆ ಯಾವ ಕೇಂದ್ರ ಸರ್ಕಾರವೂ ಹಣವನ್ನು ಕೊಟ್ಟಿಲ್ಲ. ಯಾವ ರಾಜ್ಯ ಸರ್ಕಾರವೂ ಹಣವನ್ನು ಕೊಟ್ಟಿಲ್ಲ.

ಶ್ರೀ ಎನ್.ಜಿ. ನಾಯಕ್ : ಮಾನ್ಯ ಉಪಾಧ್ಯಕ್ಷೆಯವರೆ. ಐದು ಉತ್ಸವಗಳನ್ನು ಮಾಡಿದ್ದಾರೆ. ಆ ಉತ್ಸವಗಳಿಗೆ ಎಲ್ಲೆಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂದು ಕೇಳುತ್ತಿದ್ದೇನೆ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ನಾಯಕರ ಎಲ್ಲಾ ಪ್ರಶ್ನೆಗಳು ಏನೇನು ಇದೆ. ಅದನ್ನು ಗಂಭೀರವಾಗಿ ಪರಿಶೀಲನೆ ಮಾಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಶಿವಶೇಖರಪ್ಪಗೌಡರೇ. ತಮ್ಮ 283 (1747)ನೇ ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ಒಂದು ವಾರ ಟೈಮ್ ಬೇಕು ಎಂದು ಮಂತ್ರಿಗಳು ಕೇಳಿದ್ದಾರೆ. ಮುಂದಿನ ವಾರದಲ್ಲಿ ಅದನ್ನು ತೆಗೆದುಕೊಳ್ಳೋಣ.

ಉಪಾಧ್ಯಕ್ಷರು : ಮಾನ್ಯ ಮುನಿಸ್ವಾಮಿಯವರೇ. ತಾವು 284 (1714)ನೇ ಪ್ರಶ್ನೆಯನ್ನು ಪಿ.ಡಬ್ಲ್ಯೂ.ಡಿ. ಮಿನಿಸ್ಟರಿಗೆ ಹಾಕಿರುವುದು ಎಂದು ಕಾಣುತ್ತದೆ. ಇದು ಸೋಷಿಯಲ್ ವೇಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟಿರುವಂಥದ್ದು. ಆ ಪ್ರಶ್ನೆಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಉತ್ತರ ಬಂದಮೇಲೆ ಅದನ್ನು ತೆಗೆದುಕೊಳ್ಳೋಣ.

ತುಂಗಾ ಮೇಲ್ದಂಡೆ ಯೋಜನೆ

285 (1751) ಶ್ರೀ ಕೆ.ಬಿ. ಕೋಳಿವಾಡ್ (ರಾಣಿಬೆನ್ನೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಂಗಾ ಮೇಲ್ದಂಡೆ ಯೋಜನೆಗೆ ಮಾನ್ಯ ಮುಖ್ಯಮಂತ್ರಿಗಳು ಅಡಿಗಲ್ಲನ್ನು ಹಾಕಿದ ನಂತರ ಇದುವರೆವಿಗೂ ಯಾವ ಯಾವ ಕ್ರಮಗಳನ್ನು ಸರ್ಕಾರವು ಕೈಗೊಂಡಿದೆ :

ಆ) ಸದರಿ ಯೋಜನೆಗೆ ಕೇಂದ್ರ ಸರಕಾರದ ಮನ್ನಣೆ ದೊರಕಿದೆಯೇ :

ಇ) ಈ ಸದರಿ ಯೋಜನೆಗೆ ವಿಶ್ವ ಬ್ಯಾಂಕ್‌ನ ನೆರವನ್ನು ಪಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಮಲ್ಲಿರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):

ಅ) ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ತುಂಗಾ ಮೇಲ್ದಂಡೆ ಯೋಜನೆಯ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಒಪ್ಪಿಗೆಗಾಗಿ ಮಾರ್ಚ್ 1991ರಲ್ಲಿ ಕಳುಹಿಸಲಾಗಿತ್ತು. ಸದರಿ ಆಯೋಗವು ಕೇಳಿರುವ ಹಲವು ತಾಂತ್ರಿಕ ವಿಚಾರಗಳ ಬಗ್ಗೆ ವಿವರಗಳನ್ನು ಮಾರ್ಚ್ 1992ರಲ್ಲಿ ಕಳುಹಿಸಿಕೊಡಲಾಗಿದೆ. ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಿ ತ್ವರಿತವಾಗಿ ಪೂರ್ಣಗೊಳಿಸುವ ಸಲುವಾಗಿ. ಹೊಸದಾಗಿ ಒಂದು ವಿಭಾಗ ಮತ್ತು ಮೂರು ಉಪ-ವಿಭಾಗದ ಕಛೇರಿಗಳನ್ನು ಆಗಸ್ಟ್ 1991ರಲ್ಲಿ ತೆರೆಯಲಾಗಿದೆ. ಇದಲ್ಲದೆ. ಶಿವಮೊಗ್ಗ ಪಟ್ಟಣವನ್ನು ಕೇಂದ್ರ ಕಾರ್ಯಸ್ಥಾನವನ್ನಾಗಿ ಮಾಡಿ ಒಂದು ಮುಖ್ಯ ಇಂಜಿನಿಯರ್ ಅವರ ವಲಯವನ್ನು ಸಹ ಸೃಜಿಸಿರುವ ಸರ್ಕಾರಿ ಆದೇಶವನ್ನು ಮಾರ್ಚ್ 92ರಲ್ಲಿ ಹೊರಡಿಸಲಾಗಿದೆ.

ಆ) ಕೇಂದ್ರ ಸರ್ಕಾರದ ಒಪ್ಪಿಗೆ ಇನ್ನೂ ದೊರೆತಿಲ್ಲ.

ಇ) ಈ ಯೋಜನೆಗೆ ಕೇಂದ್ರ ಸರ್ಕಾರದ ಒಪ್ಪಿಗೆ ದೊರೆತ ನಂತರ ಈ ವಿಚಾರವನ್ನು ಪರಿಶೀಲಿಸಲಾಗುವುದು.

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಉಪಾಧ್ಯಕ್ಷಿಣಿಯವರೆ. ಈ ತುಂಗಾ ಮೇಲ್ದಂಡೆ ಯೋಜನೆಗೆ ಸೆಂಟ್ರಲ್ ವಾಟರ್ ಕಮಿಷನರ್‌ರವರು ಕೆಲವೊಂದು ವಿವರಣೆಯನ್ನು ಕೇಳಿ ರಾಜ್ಯಸರ್ಕಾರಕ್ಕೆ ಕಳುಹಿಸಿದ್ದರು. ರಾಜ್ಯಸರ್ಕಾರದವರು ಆ ವಿವರಣೆಗೆ ಉತ್ತರವನ್ನು ಎಷ್ಟು ಅವಧಿಯಲ್ಲಿ ಕೊಟ್ಟಿದ್ದಾರೆ ಎನ್ನತಕ್ಕಂಥದ್ದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಇದು ಒಂದು. ಎರಡನೇಯದು. ಆಪ್ಪರ್‌ತುಂಗಾ ಯೋಜನೆ 350 ರಿಂದ 400 ಕೋಟಿ ರೂಪಾಯಿಗಳ ಯೋಜನೆ. ಈ ವರ್ಷದ ಆಯವ್ಯಯದಲ್ಲಿ ಅದಕ್ಕೆ ಎಷ್ಟು ಹಣವನ್ನು ಒದಗಿಸಿದ್ದೀರಿ ಮತ್ತು ಎರಡು ಸಾವಿರ ಇಸವಿಯೊಳಗಾಗಿ ಇದನ್ನು ಪೂರ್ತಿಗೊಳಿಸಲು ಯಾವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ ಎನ್ನತಕ್ಕಂಥದ್ದನ್ನು ತಾವು